2005–06ನೇ ಸಾಲಿನಲ್ಲಿ ಗುಲ್ಬರ್ಗಾ ಜಿಲ್ಲೆಗೆ ಮಂಜೂರು ಮಾಡಲಾದ ತಾಲ್ಲೂಕುವಾರು, ಸಂಸ್ಥೆವಾರು ಅನುದಾನದ ವಿವರ

ಕ್ರಮ ಸಂಖ್ಯೆ	ತಾಲ್ಲೂಕಿನ ಹೆಸರು	ಧಾರ್ಮಿಕ ಸಂಸ್ಥೆಯ ಸಂಖ್ಯೆ	ಮಂಜೂರಾದ ಮೊತ್ತ (ರೂ.ಲಕ್ಷಗಳಲ್ಲಿ)
1	ಗುಲ್ಬರ್ಗಾ	19	5.25
2	ಅಳಂದ	5	1.25
3	ಅಫಜಲ್‌ಪುರ	9	2.25
4	ಜೇವರ್ಗಿ	11	18.00
5	ಚಿತ್ತಾಪುರ	14	3.25
6	ಯಾದಗಿರಿ	14	9.75
7	ಶಹಾಪುರ	23	6.60
8	ಸುರಪುರ	5	1.90

2005–06ನೇ ಸಾಲಿನಲ್ಲಿ ಸರ್ಕಾರದಿಂದ ಮಂಜೂರಾದ ಅನುದಾನದಲ್ಲಿ ಸಂಸ್ಥೆಗಳಿಗೆ ಜಿಲ್ಲಾಧಿಕಾರಿಗಳ ವತಿಯಿಂದ ಬಿಡುಗಡೆ ಮಾಡಲಾದ ಸಂಸ್ಥೆವಾರು ವಿವರ

ಕ್ರಮ ಸಂಖ್ಯೆ	ತಾಲ್ಲೂಕಿನ ಹೆಸರು	ಧಾರ್ಮಿಕ ಸಂಸ್ಥೆಯ ಸಂಖ್ಯೆ	ಮಂಜೂರಾದ ಮೊತ್ತ (ರೂ.ಲಕ್ಷಗಳಲ್ಲಿ)
1	ಶಹಾಪುರ	7	2.00
2	ಗುಲ್ಬರ್ಗಾ	1	0.25
3	ನಳಂದ	1	0.25
4	ಅಫಜಲಪುರ	1	0.25
5	ಯಾದಗಿರಿ	6	2.25
6	ಚಿತ್ತಾಪುರ	6	1.50
7	ಜೇವರ್ಗಿ	1	0.25
	ಒಟ್ಟು	23	6.75

1340 (1513) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿಂದುಳಿದ ಪ್ರದೇಶ ಚಾಮರಾಜನಗರ ಜಿಲ್ಲೆಯು ಸೇರಿದಂತೆ ರಾಜ್ಯಾದ್ಯಂತ ರಿಯಾಯಿತಿ ದರದಲ್ಲಿ ವಿತರಿಸಲಾಗುತ್ತಿರುವ ಕೃಷಿ ಬೀಜಗಳಾವುವು; ಆ) ಈ ಕೃಷಿ ಬೀಜಗಳ ಮೂಲ ಬೆಲೆ ಎಷ್ಟು ;

ಇ) ಎಷ್ಟು ಪ್ರಮಾಣದಲ್ಲಿ ರಿಯಾಯಿತಿಯನ್ನು ನೀಡಲಾಗುತ್ತಿದೆ ; (ವರ್ಗವಾರು ವಿವರಣೆ ನೀಡುವುದು) ;

ಈ) ಈ ರಿಯಾಯಿತಿ ದರವು ರೈತರಿಗೆ ತಲುಪುತ್ತಿದೆಯೇ ;

ಉ) ಇಲ್ಲದಿದ್ದಲ್ಲಿ, ರೈತರಿಗೆ ಸುಲಭವಾಗಿ ತಲುಪುವಂತೆ ಮಾಡಲು ಸರ್ಕಾರದ ಕ್ರಮವೇನು?

ಶ್ರೀ ಬಂಡೆಪ್ಪ ಕಾಶಂಪೂರ್ (ಕೃಷಿ ಸಚಿವರು) –

ಅ) ಚಾಮರಾಜನಗರ ಜಿಲ್ಲೆಯು ಸೇರಿದಂತೆ ರಾಜ್ಯದ ಎಲ್ಲಾ ಜಿಲ್ಲೆಗಳ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಭತ್ತ, ರಾಗಿ, ಜೋಳ, ಮುಸುಕಿನ ಜೋಳ, ಸಜ್ಜೆ, ತೊಗರಿ, ಹೆಸರು, ಉದ್ದು, ಅಲಸಂದೆ, ಶೇಂಗಾ, ಸೂರ್ಯಕಾಂತಿ, ಸೋಯ ಅವರೆ ಬೆಳೆಗಳ ಬಿತ್ತನೆ ಬೀಜಗಳನ್ನು ರಿಯಾಯಿತಿ ದರದಲ್ಲಿ ವಿತರಿಸಲಾಗುತ್ತಿದೆ.

ಆ) ವಿವರಗಳನ್ನು ಅನುಬಂಧ–1ರಲ್ಲಿ ನೀಡಲಾಗಿದೆ.

ಇ) ಸಣ್ಣ ಮತ್ತು ಅತೀ ಸಣ್ಣ ರೈತರಿಗೆ ಶೇಕಡಾ 75ರ ರಿಯಾಯಿತಿ ನೀಡಲಾಗುತ್ತಿದೆ.

ಈ) ಹೌದು

ಉ) ಉದ್ಭವಿಸುವುದಿಲ್ಲ.

ವಿಧಾನಸಭೆ ಪ್ರಶ್ನೆ 1513

ಅನುಬಂಧ–1

ಸಣ್ಣ ಮತ್ತು ಅತಿ ಸಣ್ಣ ರೈತರಿಗೆ 2006ರ ಮುಂಗಾರು ಹಂಗಾಮಿನಲ್ಲಿ ರಿಯಾಯಿತಿ ದರದಲ್ಲಿ ವಿತರಿಸಲಾಗುತ್ತಿರುವ ಕೃಷಿ ಬೀಜಗಳಿಗೆ ನಮೀದಿಸಿರುವ ಕನಿಷ್ಟ ಮತ್ತು ಗರಿಷ್ಟ ದರಗಳು (ಪ್ರತಿ ಕ್ವಿಂಟಾಲ್‌ಗೆ ರೂ.ಗಳಲ್ಲಿ)

ಕ್ರ. ಸಂ.	ಬೆಳೆ	ವಿವರ	2006ರ ಮುಂಗಾರು	
			ಪ್ರಮಾಣೀತ	ನಿಜ ಚೀಟಿ
1	ಭತ್ತ	ಸಾರ್ವಜನಿಕ ತಳಿ	1330–1426	1296–1375
2	ಜೋಳ	ಸಾರ್ವಜನಿಕ ಸಂಕೆರ	3456–3800	3556–3744
		ಖಾಸಗಿ ಸಂಕರ		6240–9600
3	ರಾಗಿ	ಸಾರ್ವಜನಿಕ ತಳಿ	1290	1187–1275

4	ಮೆಕ್ಕೆ ಜೋಳ	ಸಾರ್ವಜನಿಕ ತಳಿ		2400
	ಖಾಸಗಿ ಸಂಕರ			3600–13000
5	ಸಜ್ಜೆ	ಸಾರ್ವಜನಿಕ ತಳಿ	1725	1832
		ಖಾಸಗಿ ಸಂಕರ		7500–14100
6	ತೊಗರಿ	ಸಾರ್ವಜನಿಕ ತಳಿ	3450–3456	3264–3360
7	ಉದ್ದು	ಸಾರ್ವಜನಿಕ ತಳಿ	4800–4992	4700–4704
8	ಹೆಸರು	ಸಾರ್ವಜನಿಕ ತಳಿ	4992	4892–4992
9	ಅಲಸಂದೆ	ಸಾರ್ವಜನಿಕ ತಳಿ	2840	2800
10	ನೆಲಗಡಲೆ	ಸುಲಿದ ಕಾಳು	3675	3175
		ಕಾಯಿ	2775	2425
11	ಸೂರ್ಯಕಾಂತಿ	ಸಾರ್ವಜನಿಕ ತಳಿ	3840	3740
		ಸಾರ್ವಜನಿಕ ಸಂಕರ	17280	15360
		ಖಾಸಗಿ ಸಂಕರ		19200–31200
12	ಸೋಯಅವರೆ	ಸಾರ್ವಜನಿಕ ತಳಿ	2016	
13	ಹತ್ತಿ	ಸಾರ್ವಜನಿಕ ಸಂಕರ	43200–86400	75800
		ಖಾಸಗಿ ಸಂಕರ ತಳಿ		75800–140000
14	ಸಂಕರ ಬತ್ತ	ಸಾರ್ವಜನಿಕ	13440	11960
		ಖಾಸಗಿ		12135–15840

ವಿಧಾನಸಭೆ ಪ್ರಶ್ನೆ 1513

ಅನುಬಂಧ–2

2006ರ ಮುಂಗಾರು ಹಂಗಾಮಿನಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಬೀಜ ವಿತರಣೆಗೆ ನೀಡಲಾಗುವ ನಿಚ್ಚಳ ರಿಯಾಯಿತಿ (ರೂ.ಗಳಲ್ಲಿ)

ಕ್ರ. ಸಂ.	ಬೆಳೆ	ವಿವರ	ಪ್ರತಿ ಕೆಜಿಗೆ ಶೇ.75ರ ರಿಯಾಯಿತಿ	
			ಪ್ರಮಾಣಿತ	ನಿಜ ಚೀಟಿ
1	ಭತ್ತ	ಸಾರ್ವಜನಿಕ ತಳಿ	10.00	9.00

2	ಜೋಳ	ಸಾರ್ವಜನಿಕ ಸಂಕೆರೆ	26.00	25.00
		ಖಾಸಗಿ ಸಂಕರ		47.00
3	ರಾಗಿ	ಸಾರ್ವಜನಿಕ ತಳಿ	10.00	9.00
4	ಮೆಕ್ಕೆ ಜೋಳ	ಸಾರ್ವಜನಿಕ ತಳಿ		18.00
		ಖಾಸಗಿ ಸಂಕರ		27.00
5	ಸಜ್ಜೆ	ಸಾರ್ವಜನಿಕ ತಳಿ	13.00	12.00
		ಖಾಸಗಿ ಸಂಕರ		58.00
6	ತೊಗರಿ	ಸಾರ್ವಜನಿಕ ತಳಿ	26.09	24.00
7	ಉದ್ದು	ಸಾರ್ವಜನಿಕ ತಳಿ	36.00	35.00
8	ಹೆಸರು	ಸಾರ್ವಜನಿಕ ತಳಿ	37.00	36.00
9	ಅಲಸಂದೆ	ಸಾರ್ವಜನಿಕ ತಳಿ	22.00	21.00
10	ನೆಲಗಡಲೆ	ಸುಲಿದ ಕಾಳು	12.00	9.00
		ಕಾಯಿ	12.00	9.00
11	ಸೂರ್ಯಕಾಂತಿ	ಸಾರ್ವಜನಿಕ ತಳಿ	29.00	28.00
		ಸಾರ್ವಜನಿಕ ಸಂಕರ	130.00	115.00
		ಖಾಸಗಿ ಸಂಕರ		158.00
12	ಸೋಯಅವರೆ	ಸಾರ್ವಜನಿಕ ತಳಿ	15.00	
13	ಹತ್ತಿ	ಸಾರ್ವಜನಿಕ ಸಂಕರ	324.00	288.00
		ಡಿಸಿಹೆಚ್–32/ಎಎಲ್‌ಸಿ	576.00	540.00
		ಡಿಹೆಚ್‌ಹೆಚ್ 11/ಡಿಹೆಚ್ ಬಿ 105	547.00	511.00
		ಖಾಸಗಿ ಸಂಕರ ತಳಿ		600.00
14	ಸಂಕರ ಬತ್ತ	ಸಾರ್ವಜನಿಕ	101.00	94.00
		ಖಾಸಗಿ		94.00

ಸೂಚನೆ : 1. ಸೋಯಬೆಳೆಯಲ್ಲಿ ಪ್ರಮಾಣಿತ ಬೀಜ ಲಭ್ಯವಿರುವುದರಿಂದ ನಿಜ ಚೀಟಿ ಬೀಜ ಪರಿಗಣಿಸಿರುವುದಿಲ್ಲ.

2. ನೆಲಗಡಲೆ ಬೆಳೆಯಲ್ಲಿ ಐಸೋಪಾಮ್ ಯೋಜನೆಯಂತೆ ರಿಯಾಯಿತಿ ನೀಡಲಾಗಿದೆ.

3. ಪ್ರತಿ ಕೆ.ಜಿ. ರಿಯಾಯಿತಿ ದರವನ್ನು ಹತ್ತಿರದ ರೂಪಾಯಿಗೆ ನಿಗದಿಪಡಿಸಿದೆ.

1341 (1514) : ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳೆ ಹಾನಿಯನ್ನು ಹಾಗೂ ಕ್ರಿಮಿ ಕೀಟವನ್ನು ತಡೆಯಲು ರೈತರಿಗೆ ಯಾವ ಯಾವ ರೀತಿಯ ಔಷಧಿಯನ್ನು ಸರ್ಕಾರದ ವತಿಯಿಂದ ವಿತರಿಸಲಾಗುತ್ತಿದೆ ;

ಆ) ಈ ಔಷಧಿಗಳಿಗೆ ಸರ್ಕಾರದ ವತಿಯಿಂದ ದೊರೆಯುವ ರಿಯಾಯಿತಿ ಎಷ್ಟು ;

ಇ) ಈ ಔಷಧಿಗಳ ಮೂಲ ಬೆಲೆ ಎಷ್ಟು ;

ಈ) ಈ ಔಷಧಿಗಳು ರೈತರಿಗೆ ಸುಲಭವಾಗಿ ದೊರೆಯುವಂತಾಗಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ?

ಶ್ರೀ ಬಂಡೆಪ್ಪ ಕಾಶಂಪುರ್ (ಕೃಷಿ ಸಚಿವರು) –

ಅ) ವಿವಿಧ ಬೆಳೆಗಳಿಗೆ ಬೀಳುವ ರೋಗ ಮತ್ತು ಕೀಟಗಳ ಹತೋಟಿಗೆ ಕೀಟನಾಶಕಗಳು, ಶಿಲೀಂದ್ರನಾಶಕಗಳು, ಜೈವಿಕ ಪೀಡೆ ನಾಶಕಗಳನ್ನು, ಕಳೆಗಳ ಹತೋಟಿಗೆ ಕಳೆನಾಶಕಗಳನ್ನು ಮತ್ತು ಇಲಿ ನಾಶಕಗಳನ್ನು ಇವೇ ಮೊದಲಾದವುಗಳನ್ನು ರಿಯಾಯಿತಿದರಲ್ಲಿ ನೀಡಲಾಗುತ್ತಿದೆ.

ಆ) ಶೇ.50ರಂತೆ ಗರಿಷ್ಠ ಹೆಕ್ಟೇರ್‌ಗೆ ರೂ.500/ರಂತೆ

ಇ) ಕರ್ನಾಟಕ ಪಾರದರ್ಶಕ ಕಾಯಿದೆಯನ್ವಯ ಟೆಂಡರ್ ಕರೆದು ಕನಿಷ್ಠ ದರ ನಿಗಧಿಪಡಿಸಿರುತ್ತದೆ.

ಈ) ಇವುಗಳನ್ನು ಕೃಷಿ ಇಲಾಖೆಯ ರೈತ ಸಂಪರ್ಕ ಕೇಂದ್ರಗಳಲ್ಲಿ ದಾಸ್ತಾನು ಮಾಡಿ ವಿತರಿಸಲಾಗುತ್ತಿದೆ.

1342 (1515) : ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಗ್ರಾಮೀಣ ನೀರು ಪೂರೈಕೆ, ನೈರ್ಮಲ್ಯ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿಂದುಳಿದ ಗಡಿ ಪ್ರದೇಶ ಚಾಮರಾಜನಗರ ಜಿಲ್ಲೆಯು ಸೇರಿದಂತೆ ರಾಜ್ಯಾದ್ಯಂತ ಕೆಟ್ಟಿರುವ ಕೊಳವೆ ಬಾವಿಗಳೆಷ್ಟು ;